3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು.

**ದಿನಾಂಕಃ 30.06.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಹೆಚ್ ಎನ್ ಎಸ್ ವಕೀಲರಿಂದಃ-**

ಆರೋಪಿಯು ನಮ್ಮ ಬ್ಯಾಂಕಿನಿಂದ ರೂ. 4.00 ಲಕ್ಷ ಸಾಲ ಪಡೆದಿರುತ್ತಾರೆ. ಆರೋಪಿಯು ರೂ. 4.00 ಲಕ್ಷ ಸಾಲ ಪಡೆದಿರುವ ಬಗ್ಗೆ ನ್ಯಾಯಾಲಯಕ್ಕೆ ಆರೋಪಿಯ ಸಾಲದ ಖಾತಾ ನಕಲನ್ನು ಹಾಜರುಪಡಿಸಿರುತ್ತೇನೆ. ಆರೋಪಿಯ ಸಾಲದ ಖಾತೆಯ ಸಂಖ್ಯೆ ಹೇಳಲಾಗುತ್ತದೆಯಾ ಎಂಬ ಪ್ರಶ್ನೆಗೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಟ್ರಾಕ್ಟರ್ ತೆಗೆದುಕೊಳ್ಳಲು ಸಾಲ ಪಡೆದಿರುತ್ತಾರೆ. ನನ್ನ ಪಿರ್ಯಾದಿಯಲ್ಲಿ ಆರೋಪಿಯು ಟ್ರಾಕ್ಟರ್ ತೆಗೆದುಕೊಳ್ಳಲು ಸಾಲ ಪಡೆದಿರುತ್ತಾರೆ ಎಂದು ಹೇಳಿರುತ್ತಾರೆ. ಪಿರ್ಯಾದಿಯಲ್ಲಾಗಲೀ ಅಥವಾ ಕಾನೂನು ತಿಳುವಳಿಕೆ ಪತ್ರದಲ್ಲಾಗಲೀ ಆರೋಪಿ ಟ್ರಾಕ್ಟರ್ ಖರೀದಿಸುವ ಸಾಲುವಾಗಿ ಸಾಲ ಪಡೆದಿರುತ್ತಾರೆ ಎಂದು ಎಲ್ಲೂ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಬ್ಯಾಂಕಿಗೆ ಸಲ್ಲಿಸಿದ ಅರ್ಜಿ ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನನ್ನ ಅರ್ಜಿಯಲ್ಲಾಗಲೀ ನೋಟಿಸಿನಲ್ಲಾಗಲೀ ಆರೋಪಿ ಪಡೆದಿರುವ ಸಾಲಕ್ಕೆ ಎಷ್ಟು ಬಡ್ಡಿ ಪಾವತಿಸಬೇಕಾಗುತ್ತದೆ ಎಂದು ನಮೂದು ಇಲ್ಲಾ ಎಂದರೆ ಸರಿ. ಆರೋಪಿಯು ಬ್ಯಾಂಕಿನಲ್ಲಿ ಎಷ್ಟು ಹಣವನ್ನು ಮರುಪಾವತಿಸಿದ್ದಾನೆ ಎಂದು ನನ್ನ ಪಿರ್ಯಾದಿಯಲ್ಲಿ ನಮೂದು ಇಲ್ಲಾ ಎಂದರೆ ಸರಿ. ರೂ. 6,32,887-00 ಮೊತ್ತವು ಎಷ್ಟು ಅಸಲು ಮತ್ತು ಬಡ್ಡಿ ಒಳಗೊಂಡಿರುತ್ತದೆ ಎಂದು ಪಿರ್ಯಾದಿಯಲ್ಲಿ ಸ್ಪಷ್ಟವಾಗಿ ನಮೂದಿಲ್ಲ ಎಂದರೆ ದಿನಾಂಕ ಃ 01.12.2018 ಕ್ಕೆ ಆರೋಪಿಯು ಅಷ್ಟು ಹಣಕ್ಕೆ ಸುಸ್ತಿದಾರರಾಗಿದ್ದರು ಎಂದು ನುಡಿಯುತ್ತಾರೆ. ದಿಃ 01.12.2018 ಕ್ಕೆ ಆರೋಪಿಯು ರೂ. 6,32,887-00 ಸುಸ್ತಿದಾರರಾಗಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿಃ 01.12.2018 ರಂದು ಆರೋಪಿಯು ಚಕ್ಕನ್ನು ನೀಡಿರುತ್ತಾರೆ ಎಂದು ತೋರಿಸಲು ನಮ್ಮ ಬಳಿ ಯಾವುದೇ ದಾಖಲೆ ಇಲ್ಲಾ ಎಂದರೆ ಸಾಕ್ಷಿಯು ಆ ದಿನ ಆರೋಪಿ ಸೆಟ್ಲಮೆಂಟ್ ಮಾಡಿ ಆ ಚೆಕ್ಕನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಸೆಟ್ಲಮೆಂಟ್ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಆ ದಿನ ಆರೋಪಿ ಸೆಟ್ಲಮೆಂಟ್ ಮಾಡುತ್ತೇನೆ ಎಂದು ಹೇಳಿ ಬ್ಯಾಂಕ್ ಮ್ಯಾನೇಜರ್ ಹೆಸರಿಗೆ ನಿಪಿ-1 ರ ಚೆಕ್ಕನ್ನು ನೀಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ಈ ಪಿರ್ಯಾದಿಯನ್ನು ಹೂಡಲು ನಮ್ಮ ಸಂಸ್ಥೆಯ ಮೇಲಾಧಿಕಾರಿಗಳ ಅನುಮತಿ ಪಡೆದಿರುವುದಿಲ್ಲ, ಸಾಕ್ಷಿ ಮುಂದುವರೆದು ಅದು ಸಂಸ್ಥೆಯ ಮ್ಯಾನೇಜರ್ ನ ವಿವೇಚನೆಗೆ ಒಳಪಟ್ಟಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-6 ನ್ನು ತಯಾರಿಸುವ ಪೂರ್ವದಲ್ಲಿ

ಸಂಸ್ಥೆಯ ನಿರ್ದೇಶಕರು ಯಾವುದೇ ಠರಾವು ಹೊರಡಿಸಿರುವುದಿಲ್ಲ. ಸಂಸ್ಥೆಯ ಅಧಿಕಾರಿಗಳಿಗೆ ನಿಪಿ-6 ನ್ನು ವಿತರಿಸುವ ಯಾವುದೇ ಅಧಿಕಾರ



ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕು ಆರೋಪಿಗೆ ಸಾಲ ನೀಡುವ ಸಮಯದಲ್ಲಿ ಭದ್ರತೆಗಾಗಿ ಪಡೆದ ಖಾಲಿ ಚೆಕ್ಕು ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕನ್ನು ಬ್ಯಾಂಕ್ ಮ್ಯಾನೇಜರ್ ಬರ್ತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಪಡೆದಿರುವ ಸಾಲವನ್ನು ಬಡ್ಡಿ ಸಮೇತ ತೀರುವಳಿ ಮಾಡಿದ್ದರೂ ಸಹ ಭದ್ರತೆಗಾಗಿ ನೀಡಿರುವ ನಿಪಿ-1 ರ ಚೆಕ್ಕನ್ನು ದುರುಪಯೋಗಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪನ್ನು ಮಾಡದಿದ್ದರೂ ಸಹ ಆತನ ವಿರುದ್ದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕಿನಲ್ಲಿರುವ ಹಣವನ್ನು ಪಾವತಿಸಲು ಆರೋಪಿಯು ಭಾದ್ಯಸ್ಥನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
C/c 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.